ಬಂದು ನಿಂತಿರುತ್ತಿದ್ದರು. ದೇವಕಾರ್ಯವೇ ಅವರ ಮುಖ್ಯ ಕಸುಬಾಗಿತ್ತು.

ಈ ದಿನವೂ ಪೂಜಾ ಗೃಹದಿಂದ ಹೊರಬಂದು ನೋಡಿದರು. ದುಖಿ ಸಮಗಾರ ಹುಲ್ಲಿನ ಹೊರೆಯೊಂದಿಗೆ ಹಿತ್ತಲ ಬಾಗಿಲಿನಲ್ಲಿ ಕುಳಿತಿರುವುದನ್ನು ಕಂಡರು. ಪಂಡಿತರನ್ನು ನೋಡಿ ದುಖಿ ಎದ್ದು ನಿಂತ. ಸಾಷ್ಟಾಂಗ ನಮಸ್ಕಾರ ಮಾಡಿ ಕೈಕಟ್ಟಿ ನಿಂತುಕೊಂಡ. ತೇಜಸ್ವಿ ಮೂರ್ತಿಯ ಮುಖವನ್ನು ಕಂಡು ಪ್ರಸನ್ನಚಿತ್ತನಾದ. ಶ್ರದ್ಧೆ ಭಕ್ತಿ ಅವನ ಹೃದಯದಲ್ಲಿ ತುಂಬಿಕೊಂಡಿತು. ದುಂಡು ಮುಖದ ಕುಳ್ಳ ವ್ಯಕ್ತಿತ್ವ, ಬೋಳು ತಲೆ, ತುಂಬಿದ ಕೆನ್ನೆ, ಬ್ರಹ್ಮತೇಜದ ಪ್ರದೀಪ ಕಣ್ಣುಗಳು!... ಎಂಥ ದಿವ್ಯ ತೇಜಸ್ಸು!...

ದುಖಿಯನ್ನು ಕಂಡು ಪಂಡಿತರು,

"ಇವತ್ತೇನು ಇಲ್ಲಿ ಬಂದೆ ದುಖಿಯಾ?..." ಎಂದರು. ದುಖಿ ತಲೆ ತಗ್ಗಿಸಿ,

"ಮಗಳ ನಿಶ್ಚಿತಾರ್ಥ ಮಾಡುತ್ತಿದ್ದೇನೆ ಬುದ್ಧಿ... ಮುಹೂರ್ತ ಪೂಜೆ ಮಾಡಬೇಕಾಗಿದೆ. ನೀವು ಅಪ್ಪಣೆ ಕೊಡಿಸಬೇಕು ಪ್ರಭು... ದಯವಿಟ್ಟು ಇಲ್ಲ ಅನ್ನಬೇಡಿ..." ಎಂದ.

"ಇವತ್ತು ಬಿಡುವು ಇಲ್ಲವಲ್ಲೋ... ಏನು ಮಾಡಲಿ... ನೋಡೋಣ, ಸಾಯಂಕಾಲ ಸಾಧ್ಯವಾದರೆ ಬರ್ತೀನಿ... ಆಯಿತಾ..." ಎಂದರು.

"ಎಲ್ಲಾ ಸಾಮಾನು ಜೋಡಿಸಿಕೊಂಡಿದ್ದೇವೆ ಪ್ರಭು, ತಾವು ದಯೆ ಮಾಡಬೇಕು. ಹಾಗೆ ಹೇಳಬೇಡಿ ಬುದ್ಧಿ... ದಯವಿಟ್ಟು ಇವತ್ತೇ ಬನ್ನಿ... ಹುಲ್ಲು ತಂದಿದ್ದೇನೆ. ಎಲ್ಲಿ ಇಡಲಿ ಸ್ವಾಮಿ?..."

"ಅಲ್ಲಿ ಹಸುವಿನ ಮುಂದೆ ಹಾಕು. ನೋಡೋಣ ಆಯ್ತಾ... ಸ್ವಲ್ಪ ಅಂಗಳದ ಕಸ ಗುಡಿಸು... ಚಾವಡಿಯನ್ನು ಬಹಳ ದಿನದಿಂದ ಸಾರಿಸಿಲ್ಲ. ಸೆಗಣಿ ರಾಡಿಯಿಂದ ಅದನ್ನು ಸಾರಿಸಿ ಬಿಡು, ಅಷ್ಟರಲ್ಲಿ ನಾನು ಊಟ ಮಾಡಿ ಸ್ವಲ್ಪ ವಿಶ್ರಾಂತಿ ಪಡೆದು ಸಿದ್ಧವಾಗ್ತೀನಿ. ಮತ್ತೆ ಕಟ್ಟಿಗೆನೂ ಒಡಿಬೇಕು ಕಣಪ್ಪಾ... ಹೊರಗಿನ ಕೊಠಡಿಯಲ್ಲಿ ಭತ್ತದ ಹೊಟ್ಟು ಬಿದ್ದಿದೆ, ಅದನ್ನು ಚೀಲದಲ್ಲಿ ತುಂಬಿ ದಾಸ್ತಾನು ಕೊಠಡಿಯಲ್ಲಿರಿಸಬೇಕು."

ಪೂಜೆ ಮುಹೂರ್ತಕ್ಕೆ ಬರುವ ಖುಷಿಯಲ್ಲಿ ಪಂಡಿತರು ಹೇಳಿದ ಎಲ್ಲಾ ಕೆಲಸವನ್ನು ಶಿರಸಾವಹಿಸಿ ಮಾಡಲು ಮುಂದಾದ. ಮೊದಲು ಬಾಗಿಲ ಮುಂದಿನ ಕಸವನ್ನು ಗುಡಿಸಿ ಎತ್ತಿಹಾಕಿದ. ಚಾವಡಿಯ ನೆಲವನ್ನು ಸೆಗಣಿ ರಾಡಿಯಲ್ಲಿ ಸಾರಿಸಿದ. ಆಗಲೇ ಹನ್ನೆರಡು ಗಂಟೆಯಾಯಿತು. ಪಂಡಿತರು ಊಟಕ್ಕೆ ಕುಳಿತರು. ದುಖಿ ಬೆಳಗ್ಗೆಯಿಂದ ಏನನ್ನೂ ತಿಂದಿರಲಿಲ್ಲ. ಪಂಡಿತರನ್ನು ಬೇಗ ಕರೆತರುವ ಅವಸರದಲ್ಲಿ ಜರಿಯಾ ಮುಂದಿರಿಸಿದ ತಿಂಡಿಯನ್ನು ಸೇವಿಸದೆ ತಳ್ಳಿ ಬಂದಿದ್ದ. ಬೇಗ ಹಿಂತಿರುಗುವೆನೆಂದು ಕೊಂಡವನಿಗೆ ಇಲ್ಲಿ ಕೆಲಸದ ಮೇಲೆ ಕೆಲಸ ಎದುರಾಯಿತಲ್ಲಾ!...

ಹೊಟ್ಟೆ ಚುರುಗುಟ್ಟಿತು. ಹಸಿವೆಗೆ ಅಲ್ಲಿ ಏನೂ ವ್ಯವಸ್ಥೆ ಇರಲಿಲ್ಲ. ಊಟಕ್ಕಾಗಿ ಮನೆಗೆ ಹಿಂತಿರುಗಬೇಕೆಂದರೆ ಅದು ಮೈಲಿ ದೂರದಲ್ಲಿತ್ತು. ಹಾಗೆಯೇ ಹೋದರೆ ಪಂಡಿತರಿಗೆ ಕೋಪ ಬರುವುದಂತು ನಿಜವೇ ಎಂದುಕೊಂಡು ಹಸಿವೆಯನ್ನು ಹಿಡಿದಿಟ್ಟುಕೊಂಡ. ಕಟ್ಟಿಗೆ ಒಡೆಯಲು ಮುಂದಾದ. ಅದು ಗಂಟಿನ ದೊಡ್ಡ ಕೊರಡಾಗಿತ್ತು. ಯಾರು ಯಾರೋ ಈಗಾಗಲೇ ಅದನ್ನು ಒಡೆಯಲು ಯತ್ನಿಸಿ ಕೈ ಚೆಲ್ಲಿದಂತಿತ್ತು. ಬರೀ ಹುಲ್ಲನ್ನು ಕತ್ತರಿಸಿ ಅಭ್ಯಾಸವಿದ್ದ ದುಖಿಗೆ ಕಟ್ಟಿಗೆ ಒಡೆಯುವ ಅನುಭವ ಎಲ್ಲಿ ಬರಬೇಕು!?... ಕುರಪಿ ಮುಂದೆ ಹುಲ್ಲು ತಲೆ ಬಾಗುತ್ತಿತ್ತು ಆದರೆ ಕೊಡಲಿಯ ಮುಂದೆ ಕೊರಡು ಮಣಿಯುವಂತಿರಲಿಲ್ಲ. ಕೊರಡಿನ ಗಂಟು ಲೋಹದಲ್ಲಿ ಮಾಡಿದಂತಿತ್ತು. ಕೊಡಲಿ ಏಟಿಗೆ ಗಂಟು ಮಿಸುಕಾಡುತ್ತಿರಲಿಲ್ಲ. ಪ್ರತಿ ಏಟಿಗೂ ಕೊಡಲಿ ಚಿಮ್ಮಿ ಬೇರೆಡೆಗೆ ಜಾರುತ್ತಿತ್ತು. ಶಕ್ತಿ ಪ್ರಯೋಗದಲ್ಲಿ ದುಖಿ ಶರೀರವೇ ಬೆವರಿನಿಂದ ತೊಯ್ದು ತೊಪ್ಪೆಯಾಯಿತು. ಮೈ ಕೈ ಕಂಪಿಸಿದವು. ಸೋತು ಸುಣ್ಣವಾದ. ಕೈ ಚೆಲ್ಲಿ ಕುಳಿತ. ದಮ್ಮು ತಗೊಂಡು